ಕಛೇರಿ : +91 80 2287 4039
+91 80 2235 4085
ಫ್ಯಾಕ್ಸ್ : +9180 2228 5591
ಇ-ಮೇಲ್ : com-hfws@karnataka.gov.in

# ಆಯುಕ್ತಾಲಯ

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು

ಸಂಖ್ಯೆ: ಡಿಡಿ/ಎಸ್ಎಸ್‌ಯು/ನೊವೆಲ್ ಕೊರೋನಾ ವೈರಸ್/17/2019-20(ಭಾಗ-1) ದಿನಾಂಕ: 05.08.2020

### ಸುತ್ತೋಲೆ

**ವಿಷಯ:** ರೋಗಲಕ್ಷಣ ಹೊಂದಿರುವ ವ್ಯಕ್ತಿಗಳ ಮಾದರಿ ಸಂಗ್ರಹಿಸುವ ಬಗ್ಗೆ.

**ಉಲ್ಲೇಖ 1:** ಸುತ್ತೋಲೆ ಸಂಖ್ಯೆ: ಎಸ್ಎಸ್‌ಯು/ಕೋವಿಡ್-19/06/2020-21, ದಿನಾಂಕ: 16.07.2020

**2:** ಸುತ್ತೋಲೆ ಸಂಖ್ಯೆ: ಎಸ್ಎಸ್‌ಯು/ಕೋವಿಡ್-19/19/2020-21, ದಿನಾಂಕ: 16.07.2020

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಎಲ್ಲಾ ರೋಗಲಕ್ಷಣ ಹೊಂದಿರುವ ವ್ಯಕ್ತಿಗಳ ಫಲಿತಾಂಶವು ಕ್ಷಿಪ್ರ ಪ್ರತಿಜನಕ ಪರೀಕ್ಷೆ (RAT) ಯಲ್ಲಿ **ನೆಗೆಟಿವ್** ಆಗಿದ್ದರೆ, ಅಂತಹವರು RTPCR ಪರೀಕ್ಷೆಗೆ ಒಳಗಾಗಿ ಅದನ್ನು ದೃಢಪಡಿಸಿಕೊಳ್ಳಬೇಕು. ಕೆಲವು ಜಿಲ್ಲೆಗಳಲ್ಲಿ ಇದನ್ನು ಅನುಸರಿಸದಿರುವುದು/ದೃಢೀಕರಣ ಪರೀಕ್ಷೆಯನ್ನು ನಡೆಸುತ್ತಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ.

ಈ ಹಿನ್ನೆಲೆಯಲ್ಲಿ, ರೋಗಲಕ್ಷಣ ಹೊಂದಿರುವ ವ್ಯಕ್ತಿಗಳು ಮಾದರಿ ಸಂಗ್ರಹಿಸುವ ಕೇಂದ್ರಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ, ಕ್ಷಿಪ್ರ ಪ್ರತಿಜನಕ ಪರೀಕ್ಷೆ (RAT) ಗಾಗಿ ಒಂದು ಮೂಗಿನ ದ್ರವದ (Nasopharyngeal swab) ಮಾದರಿಯನ್ನು ಸಂಗ್ರಹಿಸುವುದು ಮತ್ತು RTPCR ಪರೀಕ್ಷೆಗಾಗಿ ಒಂದು ಮೂಗಿನ ದ್ರವದ ಮಾದರಿ (ಇನ್ನೊಂದು ಮೂಗಿನ ಹೊಳ್ಳೆಯಿಂದ) ಹಾಗೂ ಗಂಟಲು ದ್ರವದ (Oropharyngeal swab) ಮಾದರಿಯನ್ನು ವಿ.ಟಿ.ಎಂ. ಗಳಲ್ಲಿ ಸಂಗ್ರಹಿಸುವಂತೆ ಸೂಚಿಸಿದೆ. **RTPCR App ನಲ್ಲಿ ಕೇವಲ ಒಂದು ಬಾರಿ ಮಾತ್ರ ದಾಖಲಿಸುವುದು.**

**ಕ್ಷಿಪ್ರ ಪ್ರತಿಜನಕ ಪರೀಕ್ಷೆಯ ಫಲಿತಾಂಶವು 'ನೆಗೆಟಿವ್' ಆಗಿದ್ದರೆ,** RTPCR ಪರೀಕ್ಷೆಗಾಗಿ ಸಂಗ್ರಹಿಸಿರುವ ಮಾದರಿಯ ಜೊತೆಗೆ ಐ.ಸಿ.ಎಂ.ಆರ್. ಸಂಖ್ಯೆ, ರೋಗಿಯ ಸಂಖ್ಯೆ ಮತ್ತು ರೋಗಿಯ ಇತರೆ ವಿವರಗಳನ್ನು ಗುರುತಿಸಲ್ಪಟ್ಟ ಪ್ರಯೋಗಾಲಯಗಳಿಗೆ ರವಾನಿಸುವುದು (ಹಾರ್ಡ್ ಹಾಗೂ ಸಾಫ್ಟ್ ಪ್ರತಿ)

**ಕ್ಷಿಪ್ರ ಪ್ರತಿಜನಕ ಪರೀಕ್ಷೆಯ ಫಲಿತಾಂಶವು 'ಪಾಸಿಟಿವ್' ಆಗಿದ್ದರೆ,** ವಿ.ಟಿ.ಎಂ. ಗಳಲ್ಲಿ ಸಂಗ್ರಹಿಸಿದ ಮಾದರಿಯನ್ನು 2% ಲೈಜಾಲ್ ಅಥವಾ 5% ಹೊಸದಾಗಿ ತಯಾರಿಸಿದ ಹೈಪೋಕ್ಲೋರೈಟ್ ದ್ರಾವಣ ತುಂಬಿರುವ ಜೈವಿಕ ಅಪಾಯದ ಚೀಲದಲ್ಲಿ ವಿಲೆಗೊಳಿಸುವುದು. ಸದರಿ ಚೀಲವನ್ನು ಪ್ಲಾಸ್ಟಿಕ್ ದಾರದ ಮೂಲಕ



3ನೇ ಮಹಡಿ, ಐಪಿಪಿ ಕಟ್ಟಡ, ಆನಂದ್ ರಾವ್ ವೃತ್ತ, ಬೆಂಗಳೂರು - 560 009.

ಭದ್ರಪಡಿಸುವುದು ಮತ್ತು ರಾಷ್ಟ್ರೀಯ ಜೈವಿಕ ತ್ಯಾಜ್ಯ ವಿಲೇವಾರಿ ಮಾರ್ಗಸೂಚಿಗಳನುಸಾರ ವಿಲೇವಾರಿ ಮಾಡುವುದು.

**ಆಯುಕ್ತರು**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು**

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ:**

1. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
2. ಎಲ್ಲಾ ಜಿಲ್ಲೆಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯತ್.
3. ಎಲ್ಲಾ ಜಿಲ್ಲೆಗಳ ಜಿಲ್ಲಾ ಶಸ್ತ್ರ ಚಿಕಿತ್ಸಕರು.
4. ಎಲ್ಲಾ ಜಿಲ್ಲೆಗಳ ಜಿಲ್ಲಾ ಆಕುಕ ಅಧಿಕಾರಿಗಳು.
5. ಎಲ್ಲಾ ಪ್ರಯೋಗಾಲಯಗಳ ನೋಡಲ್ ಅಧಿಕಾರಿಗಳು.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆಕುಕ ಇಲಾಖೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
4. ಅಭಿಯಾನ ನಿರ್ದೇಶಕರು, ರಾಷ್ಟ್ರೀಯ ಆರೋಗ್ಯ ಅಭಿಯಾನ.
5. ನಿರ್ದೇಶಕರು, ಆಕುಕ ಸೇವೆಗಳು.
6. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಗಳು.